MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 22-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪ್ರಥಮ 10 ತಿಂಗಳಲ್ಲಿ ಭಾರತದಿಂದ ದಾಖಲೆ ಜೋಳ ರಫ್ತು

ಭಾರತದ ಜೋಳ ರಫ್ತು 2021 ಎಪ್ರಿಲ್ 2022 ಜನವರಿ ಅವಧಿಯ 10 ತಿಂಗಳಲ್ಲಿ ದಾಖಲೆ USD 816.31 ಮಿಲಿಯನ್ ಗಳಷ್ಟು ಮೌಲ್ಯದ್ದಾಗಿದೆ. ಅಕ್ಕಿ, ಗೋಧಿ ನಂತರ ಜೋಳ ಭಾರತದ ಪ್ರಮುಖ ಬೆಳೆಯಾಗಿದೆ. ವಿಯೆಟ್ನಾಂ ಭಾರತದ ಪ್ರಮುಖ ಜೋಳ ಆಮದುದಾರನಾಗಿದ್ದು 10 ತಿಂಗಳಲ್ಲಿ 244.34 ಮಿಲಿಯನ್ ಅಮೇರಿಕ್ ಡಾಲರ್ ಮೌಲ್ಯದ ಜೋಳ ಆಮದು ಮಾಡಿಕೊಂಡಿದೆ.

## ರಫ್ತು ಬೇಡಿಕೆಯಿಂದ ಜೋಳ ದರ ಹೆಚ್ಚಳ

ಭಾರತದಲ್ಲಿ ಈ ವರ್ಷ 2021 ಜೂನ್ 2022 ಜೂನ್ ಅವಧಿಯಲ್ಲಿ ಜೋಳ ಉತ್ಪಾದನೆ ಹಿಂದಿನ ವರ್ಷದಿಂದ ಹೆಚ್ಚಳವಿದ್ದರೂ ರಫ್ತು ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದ್ದು ಕನಿಷ್ಠ ಬೆಂಬಲ ದರದಿಂದ ಹೆಚ್ಚಿನ ಮಾರುಕಟ್ಟೆ ದರವಿದೆ. ಜಾಗತಿಕ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗುತ್ತಿದೆ.

## ಖಾದ್ಯತೈಲ ದರ ಹೆಚ್ಚಳ

ಜಾಗತಿಕ ಖಾದ್ಯತೈಲ ಪೂರೈಕೆಗಿಂತ ಬೇಡಿಕೆ ಹೆಚ್ಚಳವಿರುವುದರಿಂದ ದರ ಹೆಚ್ಚಳವಾಗುತ್ತಿದೆ. ಪ್ರಸ್ತುತ ವಿದ್ಯಮಾನಗಳನ್ನನುಸರಿಸಿ ದರ ಮತ್ತು ಹೆಚ್ಚಳವಾಗಿದೆ. ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ಅಕ್ರಮ ದಾಸ್ತಾನು ತಡೆಯಲು ರೈಡ್ ಗಳಾಗುತ್ತಿದ್ದು ಅಕ್ರಮ ದಾಸ್ತಾನು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದೆನ್ನಲಾಗಿದೆ. ಪಾಮೆಣ್ಣೆ ದರ ಸತತ ಹೆಚ್ಚಳದ ನಂತರ ಈಗ ಸ್ವಲ್ಪ ಮಟ್ಟಿನ ಇಳಿಕೆಯಾಗಿದೆ.

## ಸೋಯಾಬೀನ್ ಮೀಲ್ ಜಾಗತಿಕ ಬೇಡಿಕೆ ಹೆಚ್ಚಳ

ಸೋಯಾಬೀನ್ ಮೀಲ್ ಪೂರೈಕೆ ಜಾಗತಿಕ ಬೇಡಿಕೆಗಿಂತ ಕಡಿಮೆಯಿದೆ. ಕೆಲವು ರಫ್ತು ದೇಶಗಳಿಂದ ಜಾಗತಿಕ ಪೂರೈಕೆ ನಿಂತಿರುವುದರಿಂದ ದರಗಳು ಸತತವಾಗಿ ಹೆಚ್ಚಳವಾಗಿದೆ. ಜೋಳ ಸೋಯಾಬೀನ್ ಮೀಲ್ ದರ ಹೆಚ್ಚಳದಿಂದ ಪಶು ಆಹಾರ, ಪಕ್ಷಿ ಆಹಾರ ದರಗಳ ಅನಿಯಂತ್ರಿತ ಹೆಚ್ಚಳವಾಗಿವೆ. ಪ್ರತಿಕೂಲ ಹವಾಮಾನದಿಂದ ಕೆಲವು ಪ್ರಮುಖ ಉತ್ಪಾದಕ ದೇಶಗಳ ಉತ್ಪಾದನೆ ಇಳಿಕೆಗೆ ಕಾರಣವಾಗಿವೆ. ಪ್ರಸ್ತುತ ಜಾಗತಿಕ ವಿದ್ಯಮಾನಗಳಿಂದ ಕೆಲವು ದೇಶಗಳಿಂದ ಜಾಗತಿಕ ಮಾರುಕಟ್ಟೆಗೆ ಪೂರೈಕೆಯಾಗುತ್ತಿಲ್ಲ. ಇದರಿಂದ ದರ ಸತತ ಹೆಚ್ಚಳವಾಗುತ್ತಿದೆ.